ದಸ್ತಾವೇಜುಗಳ ಸಂಖ್ಯೆ 972. ಈ ಸಂಖ್ಯೆಯನ್ನು ಆಧರಿಸಿ ಹೊಸದಾಗಿ ಉಪ ನೋಂದಣಿ ಕಛೇರಿಯನ್ನು ಪ್ರಾರಂಭಿಸುವುದು ಆಡಳಿತಾತ್ಮಕ ಹಾಗೂ ಆರ್ಥಿಕ ಹಿತದೃಷ್ಟಿಯಿಂದ ಸಮಂಜಸವಾಗಿರುವುದಿಲ್ಲ.

ನಾಡ ಕಛೇರಿ ಮಂಜೂರಾತಿ ನೀಡುವುದು

1246 (1520) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಪು ಹೋಬಳಿಗೆ ನಾಡ ಕಛೇರಿ ಮಂಜೂರಾತಿ ನೀಡಲು ಕಾನೂನಿನ ತೊಡಕಿದೆಯೇ;

ಆ) ಹಾಗಾದರೇ ಈ ಸಾಲಿನಲ್ಲಿ ನಾಡ ಕಛೇರಿ ತೆರೆಯಲು ಮಂಜೂರಾತಿ ನೀಡಲಾಗುವುದೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) – ಇಲ್ಲ –

ಆ) ಕರ್ನಾಟಕ ಆಡಳಿತ ಸುಧಾರಣೆ ಆಯೋಗದ ತನ್ನ ಅಂತಿಮ ವರದಿಯಲ್ಲಿ ರಾಜ್ಯದಲ್ಲಿರುವ ನಾಡ ಕಛೇರಿಗಳನ್ನು ರದ್ದುಪಡಿಸಲು ಶಿಫಾರಸ್ಸು ಮಾಡಿದೆ. ಪ್ರಸ್ತುತ ಇರುವ ನಾಡಕಛೇರಿಗಳು ಹೋಬಳಿ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಹಾಗೂ ಇದರಿಂದ ಬಡಜನರಿಗೆ ಅದರಲ್ಲೂ ಆರ್ಥಿಕ ದುರ್ಬಲ ವರ್ಗದವರಿಗೆ ತಾಲ್ಲೂಕುಗಳಿಗೆ ಹೋಗಿ ಕೆಲಸ ನಿರ್ವಹಿಸಿಕೊಂಡು ಬರಲು ಕಷ್ಟಸಾಧ್ಯವಾಗಿರುವುದರಿಂದ ನಾಡಕಛೇರಿಗಳನ್ನು ಮುಂದುವರೆಸಿ, ಅವುಗಳಿಗೆ ಇನ್ನೂ ಹೆಚ್ಚಿನ ಅಧಿಕಾರ ನೀಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಬಗ್ಗೆ ಅಂತಿಮವಾಗಿ ತೀರ್ಮಾನ ತೆಗೆದುಕೊಂಡ ನಂತರ ಕಾಪು ಹೋಬಳಿಗೆ ನಾಡಕಛೇರಿಯನ್ನು ತೆರೆಯುವ ಬಗ್ಗೆ ನಿಯಮಾನುಸಾರ ಪರಿಶೀಲಿಸಲಾಗುವುದು.

1249 (1088) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2003ರವರೆಗೆ ಕಾರ್ಯ ನಿರ್ವಹಿಸುತ್ತಿದ್ದ ತಾಲ್ಲೂಕು ಕೈಗಾರಿಕಾ ಕೇಂದ್ರವನ್ನು ರದ್ದುಗೊಳಿಸಿರುವುದರಿಂದ ಕೈಗಾರಿಕೋದ್ಯಮಿಗಳಿಗೆ ನೋಂದಣಿ ಮತ್ತು ಇತರೇ ಕೆಲಸಗಳಿಗೆ ಅಡಚಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;